(ಮಾನ್ಯ ಸದಸ್ಯರಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು ತಮ್ಮ ಸ್ಥಾನದ ಪಕ್ಕದಲ್ಲಿ ನೆಲದಮೇಲೆ ಧರಣಿ ಕುಳಿತುಕೊಂಡರು)

ಉಪಾಧ್ಯಕ್ಷರು.— ಮಾನ್ಯ ಯಡಿಯೂರಪ್ಪನವರೇ ದಯವಿಟ್ಟು ಮೇಲೆ ಬನ್ನಿ, ಮೇಲೆ ಕೂಡಿ.

ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).— ಮಾನ್ಯ ಯಡಿಯೂರಪ್ಪನವರೇ, ಏತಕ್ಕೆ ಹೀಗೆ ಮಾಡಂತ್ತೀರಿ; ಚರ್ಚೆ ಮಾಡಿ ಬಿಲ್ಲನ್ನು ವಾಪಸ್ ತೆಗೆದುಕೊಳ್ಳುತ್ತಾರಂತೆ, ಮೇಲೆ ಕುಳಿತುಕೊಳ್ಳಿ.

ಶ್ರೀ ಯು. ಭೂಪತಿ (ಸಂಡೂರು).— ಬಿಲ್ ವಾಪಸ್ ತೆಗೆದುಕೊಳ್ಳುತ್ತಾರಂತೆ, ಮೇಲೆ ಬನ್ನಿ, ಅವರು ಏನೋ ಮೋಡಿಲ್ಲ, ಆಕಸ್ಮಾತ್ ತಂದುಬಿಟ್ಟಿದ್ದಾರೆ, ವಾಪಸ್ ತೆಗೆದುಕೊಳ್ಳುತ್ತಾರೆ.

ಉಪಾಧ್ಯಕ್ಷರು.— ಮಾನ್ಯ ಯಡಿಯೂರಪ್ಪನವರೇ, ಮೇಲೆ ಕುಳಿತುಕೊಳ್ಳಿ. ಡಾ॥ ತಿಮ್ಮೇಗೌಡರೇ, ತಾವು ಮಾತನಾಡಿ.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಹುಣಸೂರು).— ಮಾನ್ಯ ಸಭಾಧ್ಯಕ್ಷರೇ,

ಉಪಾಧ್ಯಕ್ಷರು — ಮಾನ್ಯ ಯಡಿಯೂರಪ್ಪನವರೇ ಮೇಲೆ ಬನ್ನಿ, ನಿಮ್ಮ ಆಸನದ ಮೇಲೆ ಕುಳಿತುಕೊಳ್ಳಿ ದಯವಿಟ್ಟು.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಅಮೆಂಡ್‌ಮೆಂಟ್‌ಗಳನ್ನು ಚರ್ಚೆ ಮಾಡತಕ್ಕ ಕಾಲದಲ್ಲಿ ಹಲವಾರು ಜನ ಸ್ನೇಹಿತರು.....

(ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಬಿ. ಎಂ. ಇದಿನಬ್ಬ.— ಅಧ್ಯಕ್ಷರೇ, ಸಭೆ ವ್ಯವಸ್ಥಿತವಾಗಿಲ್ಲ.

ಅಧ್ಯಕ್ಷರು.— ಅವರು ಧರಣಿ ಕುಳಿತಿದ್ದರೂ ಸಹ ಸಭೆ ಆರ್ಡರ್‌ನಲ್ಲಿ ಇದೆ.

ಶ್ರೀ ಕೆ. ಬಿ. ಶಾಣಪ್ಪ.— ಸನ್ಮಾನ್ಯ ಅಧ್ಯಕ್ಷರೇ, ಅವರ ಸಮಸ್ಯೆ ಹೇಳಿದ್ದಾರೆ. ಒಳಗಡೆ ಕುಳಿತು ನಾವೂ ಅದನ್ನು ಕೇಳಿದ್ದೀರಿ. ಸದಸ್ಯರು ಕೆಳಗೆ ಕುಳಿತುಕೊಂಡು ಈ ಪ್ರಕಾರ...

ಅಧ್ಯಕ್ಷರು.—ಒಬ್ಬ ಸದಸ್ಯರು ಕೆಳಗೆ ಕುಳಿತರೂ ಕೂಡಾ ಸಭೆ ಡಿಸ್‌ಆರ್ಡರ್ ಆಗುವುದಿಲ್ಲ. ಸಭೆ ಆರ್ಡರ್‌ನಲ್ಲಿ ಇದೆ.

ಶ್ರೀ ಕೆ.ಬಿ. ಶಾಣಪ್ಪ.—ಅದು ನಮಗೆ ಚೆಂದ ಕಾಣುವುದಿಲ್ಲ.

ಅಧ್ಯಕ್ಷರು.—ನಿಮಗೆ ಚೆಂದ ಕಾಣದೇ ಹೋದರೆ ನಾನಂ ಏನು ಮಾಡಬೇಕು ?

ಶ್ರೀ ಕೆ.ಬಿ. ಶಾಣಪ್ಪ.—ತಾವು ದಯವಿಟ್ಟು ಅವರಿಗೆ ಹೇಳಿ.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ, ದಯವಿಟ್ಟು ಮೇಲೆ ಬಂದು ಕುಳಿತುಕೊಳ್ಳಿ. ಮೇಲೆ ಬಂದು ಕುಳಿತುಕೊಂಡು ಏನು ಹೇಳುವುದು ಇದ್ದರೆ ಹೇಳಿ, ಕೇಳುವುದು ಇದ್ದರೆ ಕೇಳಿ. ನಾನು ಹೇಳುವುದು ಹೇಳಿದ್ದೇವೆ. ಕೇಳದೇ ಇದ್ದರೆ ಏನು ಮಾಡೋಣ ?

ಶ್ರೀ ಯು. ಭೂಪತಿ.—ಸಭೆ ಟೆಕ್ನಿಕಲೀ ಡಿಸ್‌ಆರ್ಡರ್‌ನಲ್ಲಿ ಇರದೇ ಇರಬಹುದು, ಅದನ್ನು ಒಪ್ಪಿಕೊಳ್ಳುತ್ತೇನೆ, ಆದರೆ ಆದು ಈ ಮನೆಗೆ ಲಕ್ಷಣ ಅಲ್ಲ. ತಾವು ದಯವಿಟ್ಟು ಕನ್‌ವಿನ್ಸ್ ಮಾಡಬೇಕು. ಮಂತ್ರಿಗಳಿಗೆ ಹೇಳಬೇಕು. ಈ ಬಿಲ್ಲನ್ನು ವಾಪಸ್ ತೆಗೆದುಕೊಂಡುಬಿಡಿ ಎಂದು ಹೇಳಬೇಕು.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನರೇ, ತಮ್ಮ ಸೀಟಿಗೆ ಬಂದು ಕುಳಿತುಕೊಳ್ಳಿ. ತಾವು ಕೂಡದೇ ಇದ್ದರೆ ಅನಿವಾರ್ಯವಾಗಿ ಸಭೆ ನಡೆಸಬೇಕಾಗುತ್ತದೆ.

ಶ್ರೀ ಯು. ಭೂಪತಿ.—ಮಾನ್ಯ ಮಂತ್ರಿಗಳಿಗೆ ವಾಪಸ್ ತೆಗೆದುಕೊಳ್ಳಿ ಎಂದು ತಾವು ಹೇಳಬೇಕು.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ, ತಾವು ಸೀಟ್‌ಗೆ ಬಂದು ಕುಳಿತುಕೊಳ್ಳಿ. ನೀವು ನಿಮ್ಮ ಸೀಟಿಗೆ ಬರದಿದ್ದರೆ ನಾವು ಸಭೆ ನಡೆಸಬೇಕಾಗುತ್ತದೆ. ಮಾನ್ಯ ಯಡಿಯೂರಪ್ಪನವರೇ,